ಕೊಡುವುದಕ್ಕೆ ಆಗುತ್ತದೆಯೇ? ಇದೆಲ್ಲಾ ಬೇಜವಾಬ್ದಾರಿಯಾಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಮತ್ತು ಆಯವ್ಯಯದಲ್ಲಿ 60 ಸಾವಿರ ಪಂಪುಸೆಟ್‌ಗಳಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳಿದಂತಹ ಇವರ ಭರವಸೆ ಸಂಪೂರ್ಣವಾಗಿ ಸತ್ಯಕ್ಕೆ ದೂರವಾದಂತಹ ಭರವಸೆಯಾಗುತ್ತಿದೆ. ಆದುದರಿಂದ ಸರಕಾರ ಈ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಮಾಡಿ ಇಲ್ಲಿ ಉತ್ತರ ಕೊಟ್ಟು ಇದರ ಬಗ್ಗೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಬಂಗಾರುಪೇಟೆ ತಾಲ್ಲೂಕಿನ ಸಹಕಾರ ಸಂಸ್ಥೆಗಳು 10,000 ರೂಪಾಯಿ ಕೆಳಗೆ ವರಮಾನ ಇರತಕ್ಕಂತಹವರಿಂದ ಸಾಲ ವಸೂಲಿ ಮಾಡಲು ಪ್ರಾರಂಭ ಮಾಡಿದ್ದು ಹರಾಜನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ಈ ತಿಂಗಳ 4 ರಂದು ತಮಗೆ ನೋಟೀಸು ಕೂಡ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಬೈರೇಗೌಡರು ಎತ್ತಿದಂತಹ ವಿಚಾರದ ಬಗ್ಗೆ ಒಂದು ಹೇಳಿಕೆ ಇದೆ. ಈಗ ನಾವು ಸಭೆಯ ಮುಂದೆ ಕಾಗದ ಪತ್ರಗಳನ್ನು ಮಂಡಿಸುವ ಹಂತದಲ್ಲಿದ್ದೇವೆ. ಇದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದರೂ ಕೂಡ ಕಾಗದ ಪತ್ರಗಳನ್ನು ಮಂಡಿಸಿದ ಮೇಲೆ....

ಅಧ್ಯಕ್ಷರು : ಜರೂರು ವಿಚಾರಗಳನ್ನು ಕೆಲವು ಸಾರಿ ಸದನದ ಯಾವುದೇ ಭಾಗದಿಂದ ಸದಸ್ಯರುಗಳು ಸದನದ ಗಮನ ಸೆಳೆಯಬೇಕೆಂದು ಹೇಳಿದರೆ ಅದನ್ನು ತಡೆಯುವುದಕ್ಕೆ ಬಹಳ ಕಷ್ಟವಾಗುತ್ತದೆ. ನಮ್ಮನ್ನು ನಾವೇ ನಿಯಂತ್ರಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಸದನದ ಮುಂದೆ ಕಾಗದ ಪತ್ರಗಳನ್ನು ಮಂಡಿಸಿದ ಮೇಲೆ ಆಮೇಲೆ ನೋಡೋಣ.

**ಸಭೆಯ ಮುಂದಿಡಲಾಡ ಕಾಗದ ಪತ್ರಗಳು**

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1. Annual Administration Report of Upper krishna Project Command Area Development Authority Bheemarayanagudi for the year 1989-90 as required under Section 25 of Command Area Development Act, 1980.

2. 20th Annual Report and Accounts of Karnataka Film Industry Develpment Corporationn Ltd, for the year 1987-88.

3. 8th Annual Report of Jungle Lodges and Resorts Ltd, for the year 1987-88 as required under Section 619 (A) of the Companies Act, 1056.

II. Sri Dharam Singh Narayan Singh (Minister for Home) 2 leg to lay the

1. Third Annual Report of Karnataka State Police Housing Corporation Ltd, for the year 1987-88.

2. Fourth Annual Report of Karnataka State Police Housing Corporation Ltd, for the year 1988-89. as required under Section 619 (A) of the Companies Act, 1956.

III. Sri K.J. George (Minister for Housing and Urban Development) I beg to lay :

1. The Audit Reports of the Following Urban Development Authorities.

(i) Hassan for the year 1987-88 and 1988-89

(ii) Chickmangalore for the year 1988-89 and 1989-90 as required under Section 48 (5) of Karnataka Urban Development Authority Act, 1987.

Mr. Speaker : Papers laid.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ ಒಂದು ಬಹಳ ಮುಖ್ಯವಾದ ವಿಚಾರ ಇದೆ. ರೈತರ ಭೂಮಿಯನ್ನು ಹರಾಜು ಮಾಡುತ್ತಿದ್ದಾರೆ...

ಅಧ್ಯಕ್ಷರು : ಈಗಾಗಲೇ ಮಾನ್ಯ ಕಂದಾಯ ಮಂತ್ರಿಗಳು ಪ್ರಶ್ನೆಗೆ ಉತ್ತರ ಕೊಡತಕ್ಕಂತಹ ಕಾಲದಲ್ಲಿ ಹೇಳಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಸಹಕಾರಿ ಸಾಲಕ್ಕೆ ಸಂಬಂಧಪಟ್ಟಂತೆ ಹರಾಜು ನಡೆಯುತ್ತಿದೆ.

(ಗೊಂದಲ)

ಶ್ರೀ ಹೆಚ್.ವಿಕಾಂತಯ್ಯ : ಸಹಕಾರಿ ಸಾಲವನ್ನು ವಸೂಲು ಮಾಡಲು ಹರಾಜು ನಡೆಯುತ್ತಿದೆ. ಮಾನ್ಯ ಸಹಕಾರ ಮಂತ್ರಿಗಳು ಉತ್ತರ ಹೇಳತಕ್ಕಂತಹ....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಮ್ಮ ನಮ್ಮ ಕ್ಷೇತ್ರದಲ್ಲಿ ಯಾರ್ಯಾರು 10 ಸಾವಿರ ರೂಪಾಯಿ ಒಳಗೆ ಸಾಲವನ್ನು ತೆಗೆದುಕೊಂಡಿದ್ದಾರೆ ಅವರ ಸಾಲವನ್ನು ಮನ್ನಾ ಮಾಡುತ್ತಾರೆಂದು ಹೇಳಿದ್ದೇವೆ. ಸಾಲ ಹತ್ತು ಸಾವಿರ ರೂಪಾಯಿಗಳ ಒಳಗೆ ಇದ್ದರೂ ಸಹ ಇವತ್ತು ಪಿಕ್ ಅಂಡ್ ಚೂಸ್ ಮಾಡಿಕೊಂಡು ಅವರ ಆಸ್ತಿಗಳನ್ನು ಹರಾಜು ಮಾಡಿ ಸಾಲವನ್ನು ವಸೂಲಿ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಕೊನೆಯ ಪಕ್ಷ ಅದರ ಬಗ್ಗೆ ನೋಡಿ.

ಶ್ರೀ ಹೆಚ್. ವಿಕಾಂತಯ್ಯ : ಇದರ ಬಗ್ಗೆ ತಾವು ಏನಾದರೂ ಸೂಚನೆ ಕೊಟ್ಟಿದ್ದೀರ.

ಅಧ್ಯಕ್ಷರು : ಅದನ್ನು ತಾವು ಬರೆದು ಕಳುಹಿಸಿ, ಅವರು ನೋಡುತ್ತಾರೆ.

ಶ್ರೀ ಎಂ. ನಾರಾಯಣಸ್ವಾಮಿ : ನಮ್ಮ ತಾಲ್ಲೂಕಿನಲ್ಲಿ ಇವತ್ತು ರೈತರ ಆಸ್ತಿಪಾಸ್ತಿಗಳನ್ನು ಹರಾಜು ಮಾಡುವ ಮೂಲಕ ಸಾಲವನ್ನು ವಸೂಲಿ ಮಾಡುತ್ತಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಸದನದಲ್ಲಿ ಸರ್ಕಾರ ವಚನ ಕೊಟ್ಟಿದೆ. ಮಾರ್ಚಿ 31 ರವರೆಗೆ ಯಾವುದೇ ಸಾಲವನ್ನು ವಸೂಲಿ ಮಾಡಲು ರೈತರ ಆಸ್ತಿ ಪಾಸ್ತಿಗಳನ್ನು ಹರಾಜು ಮಾಡುವುದಿಲ್ಲವೆನ್ನುವ ಆಶ್ವಾಸನೆಯನ್ನು ಸರ್ಕಾರ ಕೊಟ್ಟಿದೆ. ಅದರಲ್ಲಿ ಆಯ್ಕೆಮಾಡಿಕೊಂಡು ಕೆಲವೇ ರೈತರ ಮನೆಗಳನ್ನು ಜಪ್ತಿ ಮಾಡುವುದು ಸರಿಯೆ? ಸರ್ಕಾರ ಇಂತಹ ಕಾರ್ಯಕ್ರಮ ಹಾಕಿಕೊಂಡಿರುವುದು ಸರಿಯೆ? ಅದಕ್ಕೆ ಅವಕಾಶ ಕೊಡಬಾರದು.

ಶ್ರೀ ಎಂ. ನಾರಾಯಣಸ್ವಾಮಿ : ನಮ್ಮ ತಾಲ್ಲೂಕಿನಲ್ಲಿ ಏನು ಜನರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಬಿಟ್ಟರು, ಬಿಡ್‌ದಾರರು ಯಾರೂ ಮುಂದೆ ಬರಲಿಲ್ಲವೆಂದು ತಹಶೀಲ್ದಾರ್‌ರವರು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ.